| | | | |
|---|---|---|---|
| 9 | ಮೆಟ್ರಿಕ್ ನಂತರದ ಅಲ್ಪ ಸಂಖ್ಯಾತರ ಬಾಲಕರ ವಿದ್ಯಾರ್ಥಿ ನಿಲಯ, ಹೊಳೆನರಸೀಪುರ ಟೌನ್ ಈ ಕಟ್ಟಡಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಹೊಳೆನರಸೀಪುರ ಟೌನ್ ನಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವನ್ನು ನೆಡಸಲು ಶ್ರೀ ಜಗದಯ್ಯ ಬಿನ್ ಮಹದೇವಯ್ಯ ಉಮಚಗಿ ಇವರ ಒಡೆತನದಲ್ಲಿರುವ 213.13 ಚ.ಮೀ ವಿಸ್ತೀರ್ಣದ ಮೊದಲನೇ ಅಂತಸ್ತಿನ ಕಟ್ಟಡವನ್ನು ದಿನಾಂಕ: 01-08-2010ರಿಂದ ಬಾಡಿಗೆಗೆ ಪಡೆದಿದ್ದು, ಈ ಕಟ್ಟಡಕ್ಕೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ಇವರು ಮಾಹೆಯಾನ ರೂ.6500/-(ರೂಪಾಯಿ ಆರು ಸಾವಿರದ ಐದುನೂರು ಮಾತ್ರ)ಗಳಂತೆ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿದ್ದು, ದಿನಾಂಕ: 01-08-2010ರಿಂದ ಬಾಡಿಗೆಯನ್ನು ಮಾಲೀಕರಿಗೆ ಪಾವತಿಸಬೇಕಾಗಿರುವುದರಿಂದ, ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ ಹೊಳೆನರಸೀಪುರ ಟೌನ್ ನಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ನೆಡಸಲು ಪಡೆದಿರುವ ಶ್ರೀ ಜಗದಯ್ಯ ಬಿನ್ ಮಹದೇವಯ್ಯ ಉಮಚಗಿ ಇವರ ಒಡೆತನದ ಕಟ್ಟಡಕ್ಕೆ ಸ್ಥಾಯಿ ಸಮಿತಿ ಸದಸ್ಯರು ಸ್ಥಳ ತನಿಖೆ ನಡೆಸಿದ ನಂತರ ಮಾಹೆಯಾನ ಬಾಡಿಗೆಯನ್ನು ನಿಗದಿಪಡಿಸಿದಂತೆ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಸುಲೋಚನಾ ರಾಮಕೃಷ್ಣ),
ಅಧ್ಯಕ್ಷರು,
ಸಾಮಾನ್ಯ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ

| | | | |
|---|---|---|---|
| | | ಕಟ್ಟಡದ ಮಾಲೀಕರಿಗೆ ದಿನಾಂಕ: 01-04-2011ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿದ್ದು, ಬಾಡಿಗೆಯನ್ನು ನಿಗದಿಪಡಿಸಿ ಬಾಡಿಗೆಯನ್ನು ಪಾವತಿಸಲು ಅನುಮೋದನೆಯನ್ನು ನೀಡಬೇಕೆಂದು ಕೋರಿದರು. | ಪಾವತಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು. |
| 7 | ಹಾಸನ ತಾ: ಹೆರಗು ಗ್ರಾಮದಲ್ಲಿರುವ ಅಂಗನ ವಾಡಿ ಕೇಂದ್ರದ ಕಟ್ಟಡ ದುರಸ್ಥಿ ಬಗ್ಗೆ. | ಮಾನ್ಯ ಉಪಾಧ್ಯಕ್ಷರು ಮಾತನಾಡುತ್ತಾ, ಹಾಸನ ತಾ: ಹೆರಗು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದಾಗ, ಅಂಗನವಾಡಿ ಕೇಂದ್ರದ ಕಟ್ಟಡವು ತುಂಬಾ ಶಿಥಿಲಗೊಂಡಿದ್ದು, ಬೀಳುವ ಸ್ಥಿತಿಯಲ್ಲಿದೆ. ಇದರಿಂದ ಮಕ್ಕಳು ಹೆದರಿಕೊಂಡು ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ಬರುತ್ತಿಲ್ಲ. ಆದ್ದರಿಂದ, ಸದರಿ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡ ನಿರ್ಮಿಸುವುದು ಅವಶ್ಯವಿದ್ದು, ಈ ಬಗ್ಗೆ ಉಪ ನಿರ್ದೇಶಕರು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ತಾ: ಹೆರಗು ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರದ ಕಟ್ಟಡವು ತುಂಬಾ ಶಿಥಿಲಗೊಂಡಿದ್ದು, ಬೀಳುವ ಸ್ಥಿತಿಯಲ್ಲಿರು ವುದರಿಂದ, ಹೊಸ ಕಟ್ಟಡ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅಗತ್ಯ ಕ್ರಮ ವಹಿಸುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 8 | ರಸ್ತೆಗೆ ಹಂಪ್ಸ್ ಹಾಕುವ ಬಗ್ಗೆ | ಮಾನ್ಯ ಸದಸ್ಯರಾದ ಶ್ರೀಮತಿ ಕುಸುಮಾ ಬಾಲಕೃಷ್ಣರವರು ಮಾತನಾಡುತ್ತಾ, ಚನ್ನರಾಯಪಟ್ಟಣದಿಂದ ಮೈಸೂರಿಗೆ ಹೋಗುವ ರಸ್ತೆಯ ಬದಿಯಲ್ಲಿ ಮದುವೆ ಛತ್ರವಿದೆ. ಆ ರಸ್ತೆಯಲ್ಲಿ ಸಾಕಷ್ಟು ವಾಹನಗಳು ವೇಗವಾಗಿ ಸಂಚರಿಸುತ್ತವೆ. ಸದರಿ ಛತ್ರದಲ್ಲಿ ಆಗಿಂದಾಗ್ಗೆ ಮದುವೆ ಸಮಾರಂಭಗಳು ನಡೆಯುತ್ತಿದ್ದು, ವಾಹನಗಳು ವೇಗವಾಗಿ ಬರುವುದರಿಂದ ಮಕ್ಕಳು/ವೃದ್ಧರಿಗೆ ರಸ್ತೆ ದಾಟಲು ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ, ಛತ್ರದ ಸಮೀಪ ರಸ್ತೆಗೆ 2 ಹಂಪ್ಸ್ ಗಳನ್ನು ಹಾಕಿದಲ್ಲಿ ವಾಹನಗಳ ವೇಗ ಕಡಿಮೆಯಾಗುತ್ತದೆ. ಇದರಿಂದ, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಆದ್ದರಿಂದ, ಲೋಕೋಪಯೋಗಿ ಇಲಾಖೆಯ ವತಿಯಿಂದ ಹಂಪ್ಸ್ ಹಾಕಿಸಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಸದಸ್ಯರು ಕೋರಿರುವಂತೆ ಚನ್ನರಾಯ ಪಟ್ಟಣದಿಂದ ಮೈಸೂರಿಗೆ ಹೋಗುವ ರಸ್ತೆಯ ಬದಿ ಯಲ್ಲಿರುವ ಛತ್ರದ ಸಮೀಪ ಹಂಪ್ಸ್ ಹಾಕಲು ಕ್ರಮ ವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ಇವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆ, ಹಾಸನ ಇವರು ಮಾಹೆಯಾನ ಬಾಡಿಗೆ ರೂ.47000/-ಗಳನ್ನು ನಮೂನೆ-10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, ಕಟ್ಟಡದ ಮಾಲೀಕರಿಗೆ ದಿನಾಂಕ: 23-08-2011ರಿಂದ ಬಾಡಿಗೆ ಪಾವತಿಸಬೇಕಾಗಿರುವುದರಿಂದ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡುಬೇಕೆಂದು ಕೋರಿದರು. | ವಸತಿ ಶಾಲೆಯನ್ನು ನಡೆಸಲು ಪಡೆದಿರುವ ಶ್ರೀ ರಾಜಶೇಖರ್ ಮತ್ತು ಇತರರು ಇವರಿಗೆ ಸೇರಿದ ಕಟ್ಟಡಕ್ಕೆ ಬಾಡಿಗೆಯನ್ನು ಪಾವತಿಸಲು ಮಾನ್ಯ ಸ್ಥಾಯಿ ಸಮಿತಿ ಸದಸ್ಯರು ಸ್ಥಳ ತನಿಖೆ ಮಾಡಿ ನಂತರ ನಿಗದಿಪಡಿಸಿದಂತೆ ಬಾಡಿಗೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | ಬೇಲೂರಿನಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯನ್ನು ಈ ಹಿಂದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಪಡೆದಿದ್ದ ಕಟ್ಟಡಕ್ಕೆ ಸ್ಥಳಾಂತರ ಮಾಡುವ ಬಗ್ಗೆ. | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಬೇಲೂರು ಪಟ್ಟಣದಲ್ಲಿ ಈ ಹಿಂದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಸತಿ ನಿಲಯಕ್ಕೆ ಬಾಡಿಗೆಗೆ ಪಡೆಯಲಾಗಿದ್ದ ಕಟ್ಟಡವನ್ನು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯನ್ನು ನಡೆಸಲು ಹಿಂದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ನಿಗದಿಪಡಿಸಿದ್ದ ಬಾಡಿಗೆಯನ್ನು ಪಡೆಯಲು ಕಟ್ಟಡದ ಮಾಲೀಕರು ಒಪ್ಪಿರುತ್ತಾರೆ. ಆದ್ದರಿಂದ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯನ್ನು ಸದರಿ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದ್ದು, ಇದಕ್ಕೆ ಸಭೆಯಲ್ಲಿ ಅನುಮೋದನೆ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಕೋರಿರುವಂತೆ, ಬೇಲೂರು ಪಟ್ಟಣದಲ್ಲಿ ಈ ಹಿಂದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಸತಿ ನಿಲಯಕ್ಕೆ ಪಡೆಯಲಾಗಿದ್ದ ಕಟ್ಟಡಕ್ಕೆ ಹಿಂದೆ ನಿಗದಿಪಡಿಸಿದ ಬಾಡಿಗೆಯನ್ನು ನೀಡುವ ಷರತ್ತಿನ ಮೇಲೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯನ್ನು ಸ್ಥಳಾಂತರಿಸಿರುವುದಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 6 | ಹಾಸನ ಟೌನ್ ನಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆಯನ್ನು ನಿಗದಿಪಡಿಸುವ ಬಗ್ಗೆ. | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಹಾಸನ ಟೌನ್ ನಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಹರ್ಷಮಹಲ್ ರಸ್ತೆಯಲ್ಲಿರುವ ಶ್ರೀ ಹೆಚ್.ಎಸ್.ಸುರೇಶ್ ಮತ್ತು ಇತರರಿಗೆ ಸೇರಿದ ಕಟ್ಟಡವನ್ನು ದಿನಾಂಕ: 01-04-2011ರಿಂದ ಬಾಡಿಗೆಗೆ ಪಡೆಯಲಾಗಿದೆ. ಸದರಿ ಕಟ್ಟಡವು ವಿದ್ಯಾರ್ಥಿನಿಲಯವನ್ನು ನಡೆಸಲು ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದ್ದು, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ಇವರು ಈ ಕಟ್ಟಡಕ್ಕೆ ಮಾಹೆಯಾನ ರೂ.42,500/-(ರೂಪಾಯಿ ನಲವತ್ತೆರಡು ಸಾವಿರದ ಐದುನೂರು ಮಾತ್ರ)ಗಳ ಬಾಡಿಗೆಯನ್ನು ನಮೂನೆ -10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರು ಕೋರಿರುವಂತೆ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ನಡೆಸುತ್ತಿರುವ ಶ್ರೀ ಹೆಚ್.ಎಸ್.ಸುರೇಶ್ ಮತ್ತು ಇತರರಿಗೆ ಸೇರಿದ ಕಟ್ಟಡಕ್ಕೆ ಮಾಹೆಯಾನ ರೂ.40000/-(ರೂಪಾಯಿ ನಲವತ್ತು ಸಾವಿರ ಮಾತ್ರ)ಗಳಂತೆ ದಿನಾಂಕ; 01-04-2011ರಿಂದ |

| | | | |
|---|---|---|---|
| | ಮೊತ್ತವನ್ನು ಹೆಚ್ಚಿಸುವ ಬಗ್ಗೆ. | ಗುಣಮಟ್ಟದಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಕಾಲುಸಂಕ/ಕಾಲುಸೇತುವೆಗೆ ಅಂದಾಜು ಮೊತ್ತವನ್ನು ಹೆಚ್ಚಿಸಬೇಕೆಂದು ಕೋರಿದರು. | ಮಾಡುವ ಕಾಲುಸಂಕ/ ಕಾಲುಸೇತುವೆ ಕಾಮಗಾರಿಗೆ ಅಂದಾಜು ಮೊತ್ತವನ್ನು ಹೆಚ್ಚುಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು. |
| 2 | ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಫಾಗಿಂಗ್ ಮಾಡಿಸಲು ಮತ್ತು ಮಲ ತೆಗೆಯಲು ಹೀರುವ ಯಂತ್ರವನ್ನು ಖರೀದಿಸುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀಮತಿ ಕುಸುಮ ಬಾಲಕೃಷ್ಣರವರು ಮಾತನಾಡುತ್ತಾ, ಗ್ರಾಮೀಣ ಪ್ರದೇಶಗಳಲ್ಲಿ ಸೊಳ್ಳೆಗಳು ಹೆಚ್ಚಾಗಿರುತ್ತವೆ. ಆದ್ದರಿಂದ, ಫಾಗಿಂಗ್ ಮಾಡಿಸಲು ಅನುಕೂಲವಾಗುವಂತೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿಯೂ ಸಹ ಫಾಗಿಂಗ್ ಯಂತ್ರವನ್ನು ಮತ್ತು ಮಲ ತೆಗೆಯಲು ಹೀರುವ ಯಂತ್ರವನ್ನು ಖರೀದಿಸಲು ಸೂಕ್ತ ನಿರ್ದೇಶನವನ್ನು ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಸದಸ್ಯರು ಕೋರಿರುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಸೊಳ್ಳೆಗಳ ನಿಯಂತ್ರಣಕ್ಕಾಗಿ ಮತ್ತು ಮಲವನ್ನು ತೆಗೆಯಲು ಅನುಕೂಲವಾಗುಂತೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿಯೂ ಫಾಗಿಂಗ್ ಯಂತ್ರ ಮತ್ತು ಹೀರುವ ಯಂತ್ರವನ್ನು ಖರೀದಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ನಿರ್ದೇಶನ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 3 | ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಕ್ಯಾಮೆರಾವನ್ನು ಖರೀದಿಸುವ ಬಗ್ಗೆ | ಮಾನ್ಯ ಉಪಾಧ್ಯಕ್ಷರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಇಲಾಖೆಗಳ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲು ಮತ್ತು ಕ್ಷೇತ್ರ ವೀಕ್ಷಣೆಗೆ ತೆರಳಿದ ಸಂದರ್ಭದಲ್ಲಿ ಭಾವಚಿತ್ರವನ್ನು ತೆಗೆಯಲು ಅನುಕೂಲವಾಗುವಂತೆ ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಕ್ಯಾಮೆರಾವನ್ನು ಖರೀದಿಸಿ ನೀಡಬೇಕೆಂದು ತಿಳಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಉಪಾಧ್ಯಕ್ಷರು ಕೋರಿರುವಂತೆ, ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಇಲಾಖಾ ಸಂಸ್ಥೆಗಳು ಮತ್ತು ಕ್ಷೇತ್ರ ವೀಕ್ಷಣೆಗೆ ಭೇಟಿ ನೀಡುವ ಸಮಯದಲ್ಲಿ ಭಾವಚಿತ್ರವನ್ನು ತೆಗೆಯಲು ಅನುಕೂಲ ವಾಗುವಂತೆ ಕ್ಯಾಮೆರಾಗಳನ್ನು ಖರೀದಿಸಲು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 4 | ಬೇಲೂರಿನಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಬಾಡಿಗೆ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸುವ ಬಗ್ಗೆ | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಬೇಲೂರು ಪಟ್ಟಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ತರಗತಿಯನ್ನು ನಡೆಸಲು ಶ್ರೀ ರಾಜಶೇಖರ್ ಮತ್ತು ಇತರರು ಇವರಿಗೆ ಸೇರಿದ ಕಟ್ಟಡವನ್ನು ದಿನಾಂಕ: 23-08-2011ರಿಂದ ಬಾಡಿಗೆ ಆಧಾರದ ಮೇಲೆ ಪಡೆಯಲಾಗಿದೆ. ಸದರಿ ಕಟ್ಟಡವು ಎಲ್ಲಾ ಮೂಲಭೂತ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಕೋರಿರುವಂತೆ, ಬೇಲೂರಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ |

| | | | |
|---|---|---|---|
| 4 | ಸಕಲೇಶಪುರ ತಾಲ್ಲೂಕು ವ್ಯಾಪ್ತಿಯ ಕೆಲವು ರಸ್ತೆ ಕಾಮಗಾರಿಗಳ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ (3)ರಸ್ತೆ ಕಾಮಗಾರಿ/136/2011-12 ದಿ: 20-03-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಸಕಲೇಶಪುರ ತಾಲ್ಲೂಕಿನಲ್ಲಿ ಈ ಕೆಳಕಂಡ ರಸ್ತೆಗಳು ಹಾಳಾಗಿದ್ದು, ಅವುಗಳ ದುರಸ್ಥಿ ಮಾಡಲು ಆಡಳಿತಾತ್ಮಕ ಮಂಜೂರಾತಿಗಾಗಿ ಹಾಗೂ ಅನುದಾನ ಬಿಡುಗಡೆಗಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ವಿಷಯವನ್ನು ಸಾಮಾನ್ಯ ಸ್ಥಾಯಿ ಸಮಿತಿ ಸಭೆಗೆ ಮಂಡಿಸಿದೆ.<br>1. ಸಕಲೇಶಪುರ ತಾ: ಹೆತ್ತೂರು ಗ್ರಾ.ಪಂ ಗುಂಡಿಗೆರೆ ಕೊಣಬನಹಳ್ಳಿ ಗ್ರಾಮಕ್ಕೆ ರಸ್ತೆ ಅಗಲೀಕರಣ ಮತ್ತು ಜಲ್ಲಿ ಬಿಚಾವಣೆ ರೂ.3.00ಲಕ್ಷಗಳು<br>2. ಸಕಲೇಶಪುರ ತಾ; ಹೆತ್ತೂರು ಗ್ರಾ.ಪಂ. ದೇವರು ಬರುವ ಗುಂಡಿ ರಸ್ತೆ ಅಗಲೀಕರಣ ಮತ್ತು ಜಲ್ಲಿ ಬಿಚಾವಣೆ ರೂ.4.00ಲಕ್ಷಗಳು<br>3. **ಸಕಲೇಶಪುರ ತಾ: ಹೆತ್ತೂರು ಗ್ರಾ.ಪಂ. ಹಾಡ್ಲಹಳ್ಳಿ ಸ್ಕೂಲ್ ಹಿಂಬದಿಯ** ರಸ್ತೆ ಅಗಲೀಕರಣ ಮತ್ತು ಜಲ್ಲಿ ಬಿಚಾವಣೆ ರೂ.4.00ಲಕ್ಷಗಳು<br>4. ಸಕಲೇಶಪುರ ತಾ: ಹೆತ್ತೂರು ಗ್ರಾ.ಪಂ. ಮಕ್ಕಿರಮನೆ ಉಳಿಕೆ ಕಾಮಗಾರಿ ರೂ.3.00ಲಕ್ಷಗಳು<br>ಮಾನ್ಯ ಸದಸ್ಯರುಗಳು ಸಭೆಯಲ್ಲಿ ವಿಷಯದ ಬಗ್ಗೆ ಪ್ರಸ್ತಾಪಿಸುತ್ತಾ, ಈ ಹಿಂದೆ ಕಳುಹಿಸಿದ ಪ್ರಸ್ತಾವನೆಗಳಿಗೆ ಸರ್ಕಾರದಿಂದ ಇಲ್ಲಿಯವರೆಗೆ ಅನುಮೋದನೆ ನೀಡಿರುವುದಿಲ್ಲ ಮತ್ತು ಅನುದಾನ ಬಿಡುಗಡೆಯಾರುವುದಿಲ್ಲ. ಆದ್ದರಿಂದ, ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಈ ಹಿಂದೆ ಕಳುಹಿಸಿದ ಪ್ರಸ್ತಾವನೆಗಳಿಗೆ ಸರ್ಕಾರದಿಂದ ಇಲ್ಲಿಯವರೆಗೆ ಅನುಮೋದನೆ ನೀಡಿರುವುದಿಲ್ಲ ಮತ್ತು ಅನುದಾನ ಬಿಡುಗಡೆಯಾಗದಿರುವ ಹಿನ್ನೆಲೆಯಲ್ಲಿ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| 1 | ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನ ಮಾಡುವ ಕಾಲುಸಂಕ ಕಾಮಗಾರಿಗೆ ಅಂದಾಜು | ಮಾನ್ಯ ಸದಸ್ಯರಾದ ಶ್ರೀಮತಿ ಇಂಧಿರಾಧರ್ಮಪ್ಪರವರು ಮಾತನಾಡುತ್ತಾ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಮಲೆನಾಡು ಪ್ರದೇಶಗಳಲ್ಲಿ ಅನುಷ್ಠಾನ ಮಾಡುವ ಕಾಲುಸಂಕ/ಕಾಲುಸೇತುವೆ ಕಾಮಗಾರಿಗೆ ನಿಗದಿಪಡಿಸಿರುವ ರೂ.2.00ಲಕ್ಷಗಳ ಅಂದಾಜು ಮೊತ್ತವು ತುಂಬಾ ಕಡಿಮೆಯಾಗಿದ್ದು, ಕಾಮಗಾರಿಯನ್ನು ಉತ್ತಮ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಸದಸ್ಯರು ಕೋರಿರುವಂತೆ, ಮಾತನಾಡುತ್ತಾ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಮಲೆನಾಡು ಪ್ರದೇಶಗಳಲ್ಲಿ ಅನುಷ್ಠಾನ |

| | | | |
|---|---|---|---|
| 2 | ಹಾಸನ ಟೌನ್ ನಲ್ಲಿರುವ ಮೆಟ್ರಿಕ್ ನಂತರದ ಅಲ್ಪಸಂಖ್ಯಾತರ ಬಾಲಕರ ವಿದ್ಯಾರ್ಥಿನಿಲಯದ ಬಾಡಿಗೆ ಕಟ್ಟಡಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(8)/ ಕ.ಬಾ.ನಿ/250/2011-12 ದಿನಾಂಕ: 06-03-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ಟೌನ್ ನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವನ್ನು ನಡೆಸಲು ಶ್ರೀ ಕೃಷ್ಣೇಗೌಡ ಬಿನ್ ದೊಡ್ಡೇಗೌಡ, ಜಯನಗರ ಬಡಾವಣೆ, ಹಾಸನ ಇವರ ಒಡೆತನದಲ್ಲಿರುವ ಮೊದಲನೇ, ಎರಡನೇ, ಮೂರನೇ ಅಂತಸ್ತಿನ ಕಟ್ಟಡವನ್ನು ದಿನಾಂಕ: 01-03-2011ರಿಂದ ಬಾಡಿಗೆಗೆ ಪಡೆಯಲಾಗಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಈ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ಇವರು ಮಾಹೆಯಾನ ಬಾಡಿಗೆ ರೂ.24,800/-ಗಳನ್ನು ನಿಗದಿಪಡಿಸಿ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 01-03-2011ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಇವರು ಕೋರಿರುವಂತೆ, ಹಾಸನ ನಗರದ ಜಯನಗರ ಬಡಾವಣೆಯಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವನ್ನು ನಡೆಸುತ್ತಿರುವ ಶ್ರೀ ಕೃಷ್ಣೇಗೌಡ ಬಿನ್ ದೊಡ್ಡೇಗೌಡ ಇವರ ಒಡೆತನದ ಕಟ್ಟಡಕ್ಕೆ ಸ್ಥಾಯಿ ಸಮಿತಿ ಸದಸ್ಯರುಗಳು ಸ್ಥಳ ತನಿಖೆ ನಡೆಸಿದ ನಂತರ ಮಾಹೆಯಾನ ಬಾಡಿಗೆಯನ್ನು ನಿಗದಿ ಪಡಿಸಿದಂತೆ ಪಾವತಿಸಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು. |
| 3 | ಬೇಲೂರು ತಾಲ್ಲೂಕು ಹಳೇಬೀಡು ಗ್ರಾ.ಪಂ ಸೇರಿದ ಕಟ್ಟೆ ಸೋಮನಹಳ್ಳಿ ಗ್ರಾಮದ ಸ.ನಂ.93ರ ಗುಂಡುತೋಪನ್ನು ನಿವೇಶನ ಅಭಿವೃದ್ಧಿಗೆ ಮಾರ್ಪಾಡಿಸಲು ಅನುಮತಿ ಕೋರಿರುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ ಯೋವಿ(4)/ನಿವೇಶನ/2011-12 ದಿ: 20-03-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಬೇಲೂರು ತಾಲ್ಲೂಕು ಹಳೇಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕಟ್ಟೆಸೋಮನಹಳ್ಳಿ ಗ್ರಾಮದಲ್ಲಿ ಸುಮಾರು 20 ದಲಿತ ಕುಟುಂಬಗಳಿದ್ದು, ಇವರಿಗೆ ಶಾಶ್ವತ ನಿವೇಶನ ಹಕ್ಕು ಪತ್ರ ವಿತರಿಸಲು ಸದರಿ ಗ್ರಾಮದ ಸ.ನಂ.93ರಲ್ಲಿರುವ ಗುಂಡು ತೋಪಿನಲ್ಲಿರುವ ಜಾಗವನ್ನು ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.35:ಎಲ್ಜಿ:ಹೆಚ್.86 ದಿನಾಂಕ: 26-04-1989ರಂತೆ ಜಿಲ್ಲಾ ಪಂಚಾಯಿತಿಯಿಂದ ಮಂಜೂರಾತಿ ಪಡೆಯಬೇಕಾಗಿರುವುದರಿಂದ, ಸದರಿ ವಿಷಯದ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಅಭಿಪ್ರಾಯ ಕೋರಿರುವ ಮಾಹಿತಿಯನ್ನು ಸಾಮಾನ್ಯ ಸ್ಥಾಯಿ ಸಮಿತಿ ಸಭೆಗೆ ಟಿಪ್ಪಣಿ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಬೇಲೂರು ತಾಲ್ಲೂಕು ಹಳೇಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕಟ್ಟೆಸೋಮನಹಳ್ಳಿ ಗ್ರಾಮದ ಸ.ನಂ. 93ರಲ್ಲಿರುವ ಗುಂಡು ತೋಪಿನಲ್ಲಿರುವ ಜಾಗವನ್ನು ಸದರಿ ಗ್ರಾಮದ 20 ದಲಿತ ಕುಟುಂಬಗಳಿಗೆ ಶಾಶ್ವತ ನಿವೇಶನ ಹಕ್ಕು ಪತ್ರ ವಿತರಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

**ದಿನಾಂಕ: 26-03-2012ರಂದು ಪೂರ್ವಾಹ್ನ:11-30ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷತೆ: ಶ್ರೀಮತಿ ಸುಲೋಚನಾ ರಾಮಕೃಷ್ಣ**

**ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ**

**ಹಾಜರಿ:06** **ಗೈರು ಹಾಜರಿ:01**

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, , ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಹೊಳೆನರಸೀಪುರ ಟೌನ್ ನಲ್ಲಿರುವ 75 ಸಂಖ್ಯಾಬಲದ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)ಕಬಾನಿ 222/2011-12 ದಿನಾಂಕ: 23-01-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹೊಳೆನರಸೀಪುರ ಟೌನ್ ನಲ್ಲಿರುವ 75 ಸಂಖ್ಯಾಬಲದ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವನ್ನು ಶ್ರೀ ಜಗದಯ್ಯ ಮತ್ತು ವೀರಯ್ಯ ಬಿನ್ ಮಹದೇವಯ್ಯ ಉಮಚಗಿ ಇವರ ಒಡೆತನದಲ್ಲಿರುವ ಕಟ್ಟಡದಲ್ಲಿ ದಿನಾಂಕ: 01-08-2010ರಿಂದ ಬಾಡಿಗೆಗೆ ಪಡೆಯಲಾಗಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನರವರು ಮಾಹೆಯಾನ ಬಾಡಿಗೆ ರೂ.8500/-ಗಳನ್ನು ನಿಗದಿಪಡಿಸಿ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 01-08-2010ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ ಹೊಳೆನರಸೀಪುರ ಟೌನ್ ನಲ್ಲಿ ಶ್ರೀ ಜಗದಯ್ಯ ಮತ್ತು ವೀರಯ್ಯ ಬಿನ್ ಮಹದೇವಯ್ಯ ಉಮಚಗಿ ಇವರ ಒಡೆತನ ದಲ್ಲಿರುವ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಸ್ಥಾಯಿ ಸಮಿತಿ ಸದಸ್ಯರಿಂದ ಸ್ಥಳ ತನಿಖೆ ನಡೆಸಿದ ನಂತರ ಬಾಡಿಗೆಯನ್ನು ನಿಗದಿಪಡಿಸಿದಂತೆ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು. |

5. ಶ್ರೀ ಬಿಳಿಚೌಡಯ್ಯ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
6. ಶ್ರೀ ಬಿ.ಎನ್.ರಾಮಚಂದ್ರ (ಭೈರಮುಡಿ ರಾಮಚಂದ್ರು), ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
7. ಶ್ರೀಮತಿ ಹೆಚ್.ಎನ್.ಗೌರಮ್ಮ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ ಮಾಹಿತಿಗಾಗಿ
9. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
10. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ
11. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
12. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
13. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ/ ಚನ್ನರಾಯಪಟ್ಟಣ
16. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹಾಸನ ಮತ್ತು ಚನ್ನರಾಯ
17. ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
18. ಉಪ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ಇಲಾಖೆ, ಹಾಸನ.
19. ಕಛೇರಿ ಪ್ರತಿ.

# ಜಿಲ್ಲಾ ಪಂಚಾಯಿತಿ, ಹಾಸನ.

ಸಂಖ್ಯೆ: ಜಿ.ಪಂಹಾ/ಪ.ಶಾ/ 73/2011-12

ದಿನಾಂಕ: 19-03-2012

## ಸಭಾಹ್ವಾನ ಪತ್ರ

ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ **ದಿನಾಂಕ: 26-03-2012**ರಂದು **ಸೋಮವಾರ ಬೆಳಿಗ್ಗೆ: 11-00**ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಸದಸ್ಯರುಗಳು ಸಕಾಲಕ್ಕೆ ಹಾಜರಾಗಬೇಕೆಂದು ಕೋರಿದೆ.

ಸ್ವಹಸ್ತ ಕಾರ್ಯದರ್ಶಿ ಹಾಗೂ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯಿತಿ, ಹಾಸನ.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಹೊಳೆನರಸೀಪುರ ಟೌನ್‌ನಲ್ಲಿರುವ 75 ಸಂಖ್ಯಾಬಲದ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.
2. ಹಾಸನ ಟೌನ್‌ನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಪ್ರತಿಯನ್ನು:

1. ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ
2. ಶ್ರೀಮತಿ ಕುಸುಮ ಬಾಲಕೃಷ್ಣ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
3. ಶ್ರೀಮತಿ ಜಿ.ಟಿ. ಇಂದಿರಾಧರ್ಮಪ್ಪ, ಸದಸ್ಯರು, ಸಾಮಾನ್ಯ ನ್ಯಾಯ ಸ್ಥಾಯಿ ಸಮಿತಿ
4. ಶ್ರೀ ದೇವೇಗೌಡ ಉರುಫ್ ಪಾಪಣ್ಣಿ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ